# ಕನ್ನಡದಲ್ಲಿ ಅನುವಾದ

## ಆನ್‌ಲೈನ್ ತರಗತಿಗಳು ಮತ್ತು ಇನ್ನಿತರ ವಿಷಯಗಳು

ಆತ್ಮೀಯ ಪಾಲಕರೇ/ಪೋಷಕರೇ

ತಾವು ಮತ್ತು ತಮ್ಮ ಕುಟುಂಬದವರು ಸುರಕ್ಷಿತವಾಗಿ ಹಾಗೂ ಆರೋಗ್ಯಕರವಾಗಿರುವಿರಿ ಎಂದು ಭಾವಿಸುತ್ತೇವೆ.

ತಮ್ಮ ಮಗಳು ಅವಳ ಸ್ನೇಹಿತೆಯರನ್ನು ಭೇಟಿಯಾಗಲು ಎದುರು ನೋಡುತ್ತಿದ್ದಾಳೆ ಮತ್ತು ಶಾಲೆಯ ಮರು ತೆರೆಯುವಿಕೆಗಾಗಿ ಕಾತುರದಿಂದ ಕಾಯುತ್ತಿದ್ದಾಳೆ ಎಂದು ನನಗೆ ಖಾತ್ರಿಯಿದೆ. ಶಾಲೆಯು ಅವಳನ್ನು ತುಂಬಾ ನೆನೆಪಿಸಿಕೊಳ್ಳುತ್ತಿದೆ. ಕಾರಿಡಾರ್‌ಗಳಲ್ಲಿ ಅವಳು ಓಡಾಡುತ್ತಿದ್ದಾಗ ಆಗುತ್ತಿದ್ದ ಅವಳ ಹೆಜ್ಜೆಯ ಚರ–ಚುರ್ ಸದ್ದುಗಳು ಕಾಣೆಯಾಗಿವೆ. ಖಾಲಿಯಿರುವ ತರಗತಿಗಳು ನಮ್ಮನ್ನು ನೋಡಿ ಅವರ ನಿವಾಸಿಗಳ ಕುರಿತು ಕೇಳುತ್ತಿವೆ. ಹಿಂದೆ ಸಂತೋಷ, ಖುಷಿ, ಮೋಜು, ನಗು ಮತ್ತು ಉತ್ಸಾಹಗಳಿಂದ ತುಂಬಿ ಕಂಪಿಸುತ್ತಿದ್ದ ವಸತಿನಿಲಯಗಳು ಅವರ ಪ್ರೀತಿಪಾತ್ರರ ಬರುವಿಕೆಗಾಗಿ ಕಾಯುತ್ತ ಮಂಕಾಗಿ ಕುಳಿತಿವೆ. ವಿದ್ಯಾರ್ಥಿನಿಯರ ಭೋಜನಾಲಯ, ಪೆವಿಲಿಯನ್, ಸವಾರಿಭೂಮಿ, ಜಿಮ್, ಈಜು ಕೊಳ ಅಲ್ಲದೇ ರಸ್ತೆಗಳೂ ಸಹ ತುಂಬಾ ನಿರ್ಜನವಾಗಿ ಗೋಚರಿಸುತ್ತಿವೆ. ಹೌದು, ನಾವು ಅವರನ್ನು ನೆನಪಿಸಿಕೊಳ್ಳುತ್ತಿದ್ದೇವೆ ಮತ್ತು ಅವರು ಬೇಗನೆ ಮರಳಿ ಬರಲಿ ಎಂದು ಆಶಿಸುತ್ತೇವೆ. ನಾನು ಕೂಡ ನನ್ನ ಮೊಮ್ಮಕ್ಕಳನ್ನು ತುಂಬಾ ನೆನೆಪಿಸಿಕೊಳ್ಳುತ್ತಿದ್ದೇನೆ ; ಅವರಿಲ್ಲದೇ ಯಾವ ಸ್ಥಳವು ಮೊದಲಿನಂತೆ ಕಾಣುತ್ತಿಲ್ಲ – ಜೀವಂತಿಕೆ, ಪ್ರಕಾಶತೆ ಮತ್ತು ಚೈತನ್ಯ ಕಾಣೆಯಾಗುತ್ತಿರುವಂತೆ ಅನ್ನಿಸುತ್ತಿದೆ.

ತರಗತಿಗಳು, ಆಟದ ಮೈದಾನಗಳು ಮತ್ತು ಇತರೆ ಸೌಲಭ್ಯಗಳನ್ನು ಮುಚ್ಚಲಾಗಿದೆ, ಶಾಲೆಯನ್ನಲ್ಲ. ನಮ್ಮ ಶಾಲಾ ಸಿಬ್ಬಂದಿ ಬದಲಾದ ಸನ್ನಿವೇಶಕ್ಕೆ ತನ್ನನ್ನು ತಾನೇ ಮರುಹೊಂದಿಸಿಕೊಳ್ಳಲು ತೆರೆಮರೆಯಲ್ಲಿ ಹಿಂದೆಂದಿಗಿಂತಲೂ ಕಠಿಣವಾಗಿ ಶ್ರಮಿಸುತ್ತಿದೆ ಮತ್ತು ವಿದ್ಯಾರ್ಥಿಯರನ್ನು ತಲುಪಲು ಬೇರೆ ಬೇರೆ ಮಾರ್ಗಗಳಲ್ಲಿ ತಲುಪಲು ತನ್ನನ್ನು ತಾನು ಪರೀಶೋಧಿಸಿಕೊಳ್ಳುವ ಕಾರ್ಯದಲ್ಲಿದೆ. ಶಿಕ್ಷಕರು ಆನ್‌ಲೈನ್ ಭೋಧನೆ ಮಾಡುವುದನ್ನು ಕಲಿತು ಅಳವಡಿಸಿಕೊಂಡಿದ್ದಾರೆ.

ನಾವು 12ನೇ ತರಗತಿಯ ವಿದ್ಯಾರ್ಥಿನಿಯರಿಗೆ ಭೋಧನೆಯನ್ನು ಏಪ್ರಿಲ್‌ನಲ್ಲಿ ಪ್ರಾರಂಭಿಸಿ ಜೂನ್ ಅಂತ್ಯದ ವೇಳೆಗೆ ಎಲ್ಲ ತರಗತಿಗಳನ್ನು ಆನ್‌ಲೈನ್ ಮೂಲಕ ಭೋಧಿಸಲಾಗಿದೆ. ನಾನು ಹೊಸ 11ನೇ ತರಗತಿಯ ಪಾಲಕರಲ್ಲಿ ಆನ್‌ಲೈನ್ ಭೋಧನೆಗೆ ತಮ್ಮ ಮಕ್ಕಳ ನೋಂದಣಿ ಮಾಡಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ; ನಾವು ಶೀಘ್ರದಲ್ಲೆ ಆನ್‌ಲೈನ್ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದೇವೆ. ನೇತ್ರತ್ವ ವಹಿಸಿಕೊಂಡು ಆನ್‌ಲೈನ್ ತರಗತಿಗಳನ್ನು ಪ್ರಾರಂಭಿಸಲು ಅನುಕೂಲ ಮಾಡಿಕೊಟ್ಟ ಶ್ರೀಮತಿ ರೂಪಾಲಿ ಚೌಹಾನ್, ವಿದ್ಯಾರ್ಥಿ ಹಾಗೂ ಪಾಲಕರ ಸಂಘದ ಆಧ್ಯಕ್ಷರು ಇವರಿಗೆ ಕೃತಜ್ಞನಾಗಿದ್ದೇನೆ. ಅವರು ತಮ್ಮ ಕಂಪನಿಯ ಆನ್‌ಲೈನ್ ವೇದಿಕೆಯನ್ನು ಬಳಕೆ ಮಾಡಿ ಮತ್ತು ಸ್ವಂತ ಸಂಪರ್ಕದಲ್ಲಿರುವವರ ಸಹಾಯ ಪಡೆದು ಆವರ್ತನ ಶ್ರೇಣಿಯನ್ನು ಹೆಚ್ಚಿಸಿದ್ದಾರೆ ಮತ್ತು ಹೆಚ್ಚಿನ ವೇಗದ ಇಂಟರ್‌ನೆಟ್‌ನ್ನು ನೀಡಿದ್ದಾರೆ– ಮೊದಲು ನಾವು 10 Mbps ವೇಗದ ಇಂಟರನೆಟ್ ಸೌಲಭ್ಯ ಹೊಂದಿದ್ದು ಈಗ 40 Mbps ವೇಗದ ಇಂಟರನೆಟ್ ಸೌಲಭ್ಯ ಹೊಂದಿದ್ದೇವೆ.

ನಾವು ಶೀಘ್ರದಲ್ಲಿಯೇ ಆನ್‌ಲೈನ್ ಭೋಧನೆಯನ್ನು ಪ್ರಾರಂಭಿಸಲು ಸಂಕಲ್ಪ ಮಾಡಿದ್ದೇವೆ ಮತ್ತು ನಿಮ್ಮಿಂದ ಕೆಲವು ತಾಂತ್ರಿಕ ಬೆಂಬಲವನ್ನು ಕೋರಲು ಬಯಸುತ್ತೇನೆ. ಈ ಕೆಳಗಿನವುಗಳು ನಾವು ವಿದ್ಯಾರ್ಥಿನಿಯರನ್ನು ತಲುಪಲು ಅಗಾಧವಾಗಿ ಸಹಾಯ ಮಾಡುತ್ತವೆ.

- ವೆಬ್‌ಕ್ಯಾಮ್ ಹೊಂದಿರುವ ಕಂಪ್ಯೂಟರ್/ ಲ್ಯಾಪ್‌ಟಾಪ್, 4 ಜಿಬಿ ರ‍್ಯಾಮ್, 500 ಜಿಬಿ ಹಾರ್ಡ ಡಿಸ್ಕ, ಕೋರ್ ಆಯ್3 ಪ್ರೊಸೆಸ್ಸಾರ್ ಅಥವಾ ಸಮನಾಗಿರುವವು ( ಒಂದು ವೇಳೆ ವಿದ್ಯುತ್ ವ್ಯತ್ಯಯವಾದಲ್ಲಿ ಡೆಸ್ಕಟಾಪ್ ಕಂಪ್ಯೂಟರ್‌ಗಳಿಗಾಗಿ ಕನಿಷ್ಟ 4 ಗಂಟೆಗಳ ವಿದ್ಯುತ್ ಬ್ಯಾಕ್‌ಅಪ್)

- ಶಿಕ್ಷಕರು ಮತ್ತು ವೀಡಿಯೊ, ಚಿತ್ರಗಳಂತಹ ಭೋಧನಾ ಸಾಮಗ್ರಿ ಇತ್ಯಾದಿಗಳು ಸ್ಥಳಾವಕಾಶ ಕಲ್ಪಿಸಲು ಸಮಂಜಸವಾದ ವೇಗದ ಇಂಟರ್‌ನೆಟ್.

- ಮೈಕ್ ಜೊತೆ ಹೆಡ್‌ಪೋನ್‌ಗಳು/ಇಯರ್‌ಪೋನ್‌ಗಳು.

ಒಂದು ವೇಳೆ ಇವುಗಳು ಲಭ್ಯವಿಲ್ಲದಿದ್ದರೆ ಅಥವಾ ಸಾಧ್ಯವಾಗದಿದ್ದರೆ, ಸಮಂಜಸವಾದ ವೇಗದ ಇಂಟರ್‌ನೆಟ್ ಸಂಪರ್ಕ ಹೊಂದಿರುವ ಸ್ಮಾರ್ಟಪೋನ್‌ಗಳು ಸಾಕಾಗುತ್ತವೆ; ಹೆಡ್‌ಪೋನ್/ ಇಯರ್‌ಪೋನ್‌ಗಳ ಬಳಕೆ ಉತ್ತಮ ಏಕಾಗ್ರತೆಯನ್ನು ಖಾತ್ರಿ ಪಡಿಸುತ್ತದೆ. ಆದಾಗ್ಯೂ, ಮೊಬೈಲ್‌ಗಳ ಜೊತೆಗೆ ಏಕರೂಪವಾಗಿ ಬರುವ ವಿಕಿರಣಶೀಲ ಅಲೆಗಳಿಗೆ ಮಕ್ಕಳು ಒಡ್ಡಿಕೊಳ್ಳುವುದನ್ನು ತಪ್ಪಿಸಬೇಕು ಎಂಬುದು ನನ್ನ ವೈಯಕ್ತಿಕ ಭಾವನೆ. ಸ್ಮಾರ್ಟಪೋನ್‌ಗಳನ್ನು ಬಳಸುವ ಬದಲಾಗಿ ಟ್ಯಾಬ್ ಬಳಕೆ ಮಾಡಲು ಸಲಹೆ ಮಾಡಬಹುದು – ಸಣ್ಣ ಪರದೆಯಲ್ಲಿ ಇಣುಕಿ ನೋಡುವ ಬದಲು ಅವಳು ದೊಡ್ಡ ಪರದೆ ಹೊಂದುವಳು.

ಎರಡೂ ಸಂದರ್ಭಗಳಲ್ಲಿ ದಯಮಾಡಿ ಅವಳು ಕಂಪ್ಯೂಟರ್/ಲ್ಯಾಪ್‌ಟಾಪ್/ಟ್ಯಾಬ್/ಸ್ಮಾರ್ಟಪೋನ್‌ನ ಡೆಸ್ಕಟಾಪ್ ಮುಂದಿರಲು ಪ್ರತ್ಯೇಕವಾದ ಅಲ್ಲದೇ ಸಮರ್ಪಿತವಾದ ಸಮಯ ಹೊಂದಿರುವಳು ಎಂಬುದನ್ನು ಖಚಿತಪಡಿಸಿಕೊಳ್ಳಿ.

ಸಿಬಿಎಸ್‌ಇ ಮಾಹಿತಿಗಳು, ಪ್ರಶ್ನೆಪತ್ರಿಕೆ ಮುಂತಾದವುಗಳಿಗಾಗಿ ತಾವು ವೆಬ್‌ಸೈಟ್ **http://mycbseguide.com** ಗೆ ಭೇಟಿ ನೀಡಬಹುದು.

ಪಠ್ಯಪುಸ್ತಕಗಳನ್ನು ಸಂಗ್ರಹಿಸುವ ವೇಳಾಪಟ್ಟಿಯನ್ನು ಸೂಕ್ತ ಸಮಯದಲ್ಲಿ ತಿಳಿಸಲಾಗುವದು. ಈ ಮಧ್ಯೆ ತಾವು ಇ–ಪಠ್ಯಪುಸ್ತಕಗಳಿಗಾಗಿ ದಯಮಾಡಿ ವೆಬ್‌ಸೈಟ್ **http://ncert.nic.in/ebooks.html** ಅಲ್ಲದೇ **http://epathshala.nic.in** ಗೆ ಭೇಟಿ ನೀಡಿ. ಸದರಿ ಪಠ್ಯಪುಸ್ತಕಗಳು ಪಿಡಿಎಫ್ ನಲ್ಲಿ ಇರುತ್ತವೆ ಮತ್ತು ಇವುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವಿಲ್ಲ; ಗತ್ಯಂತರವಿಲ್ಲದೇ ವಿದ್ಯಾರ್ಥಿನಿಯರು ಆನ್‌ಲೈನ್‌ನಲ್ಲಿಯೇ ಓದಬೇಕು. ಒಂದು ವೇಳೆ ಇ–ಪಠ್ಯಪುಸ್ತಕ ಬೇರೆ ಕಂಪ್ಯೂಟರ್/ಟ್ಯಾಬ್/ಸ್ಮಾರ್ಟಪೋನ್‌ನಲ್ಲಿ ತೆರೆದಿದ್ದರೆ ಅದರಿಂದ ತುಂಬಾ ಉಪಯೋಗವಾಗುತ್ತದೆ ಇದರಿಂದ ಅವಳ ಆನ್‌ಲೈನ್ ತರಗತಿಗಳು ನಡೆಯುತ್ತಿರುವ ಸಂಧರ್ಭಗಳಲ್ಲಿ ಪಕ್ಕದಲ್ಲಿ ಪಠ್ಯಪುಸ್ತಕ ತೆರೆದುಕೊಂಡು ಅವಳು ಅಭ್ಯಾಸ ಮಾಡಬಹುದಾಗಿದೆ.

ಸರ್ಕಾರ ಶಾಲಾ ಆವರಣದಲ್ಲಿ ಮರಳಿ ಮಕ್ಕಳಿಗೆ ಪ್ರವೇಶಿಸಲು ಅನುಮತಿ ನೀಡಲು ಆದೇಶ ನೀಡುವವರೆಗೂ, ನಾವು ಆನ್‌ಲೈನ್ ಭೋಧನೆ/ ಕಲಿಕೆ ವಿಧಾನವನ್ನು ಅಳವಡಿಸಿಕೊಳ್ಳಬೇಕು ಮತ್ತು ಹೊಂದಿಕೊಳ್ಳಬೇಕು.

ಆನ್‌ಲೈನ್ ಭೋಧನೆ/ ಕಲಿಕೆ ತರಗತಿಯ ಅನುಭವಕ್ಕೆ ಪರ್ಯಾಯವಲ್ಲ ಎಂಬುದನ್ನು ಹೇಳಲು ನಾನು ಆತುರಗೊಂಡಿರುವೆ. ವಿದ್ಯಾರ್ಥಿನಿಯರು ಅವರ ಭಯ, ಆತಂಕ ಮುಂತಾದವುಗಳನ್ನು ದೂರವಾಗಿರಿಸುವ, ಆತ್ಮವಿಶ್ವಾಸವನ್ನು ಕಲಿಯಲು ಮತ್ತು ಪಡೆಯಲು ಪ್ರೇರಣೆ ನೀಡುವ ಅಲ್ಲದೇ ದೈಹಿಕ ಮತ್ತು ಭಾವನಾತ್ಮಕವಾಗಿ ಉಪಸ್ಥಿತರಿರುವ ಶಿಕ್ಷಕರ ಮುಖಾಂತರ ಕಲಿಯುತ್ತಾರೆ. ಅಲ್ಲದೇ ಸದರಿ ಕಲಿಕಾ ಅನುಭವವನ್ನು ವರ್ಧಿಸಲು ಸ್ನೇಹಿತೆಯರು ಸಹಾಯ ಮಾಡುತ್ತಾರೆ. ಪಬ್ಲಿಕ್ ಶಾಲೆಯ ಭೋಧನೆಯು ತರಗತಿಗಳಲ್ಲಿರುವ ಜ್ಞಾನವನ್ನು ದಾಟಿರುತ್ತದೆ ಮತ್ತು ಸಮಗ್ರ ಅಭಿವೃದ್ಧಿಯತ್ತ ಗಮನಹರಿಸುತ್ತದೆ. ಆದ್ದರಿಂದಲೇ ಈ ಶಾಲೆಯು ತನ್ನ 50 ವರ್ಷಗಳ ಸುದೀರ್ಘ ಪ್ರಯಾಣದಲ್ಲಿ ಬಹಳಷ್ಟು ಅದ್ಭುತ ಮತ್ತು ಯಶಸ್ವಿಯಾಗಿರುವ ಹಳೆಯ ವಿದ್ಯಾರ್ಥಿನಿಯರನ್ನು ನೀಡಿದೆ. ಲಭ್ಯವಿರುವ ಮೊದಲ ಅವಕಾಶದಲ್ಲಿಯೇ ನಮ್ಮ ಮಕ್ಕಳನ್ನು ನಮ್ಮ ಅಂಗಳಕ್ಕೆ ಹಿಂತಿರುಗಿ ಪಡೆಯಲು ಇಚ್ಛಿಸಿದ್ದೇವೆ. ಅಲ್ಲಿಯವರೆಗೂ ನೀವು ನಮ್ಮ ಜೊತೆಗೆ ಇರಿ ಮತ್ತು ಈ ತಾತ್ಕಾಲಿಕ ಸೇವೆ ಅಳವಡಿಸಿಕೊಳ್ಳಿ.

ಕೊರೋನಾ ವೈರಸ್ ನಮ್ಮ ಜೀವನವನ್ನು ಪ್ರವೇಶಿಸಿದಾಗಿನಿಂದಲೂ ಸಾಕಷ್ಟು ಬದಲಾವಣೆಯಾಗಿದೆ ಮತ್ತು ಹೊಸ ಆಯಾಮಗಳನ್ನು ವ್ಯಾಖ್ಯಾನಿಸಲು ಪ್ರಾರಂಭಿಸಿದೆ. ವಿದ್ಯಾರ್ಥಿನಿಯರು ಮನೆಯಲ್ಲಿಯೇ ಇರಬೇಕಾಗಿದೆ ಮತ್ತು ದೈಹಿಕವಾಗಿ ಶಾಲೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ, ನಿಮ್ಮ ಮಗಳಿಗೆ ಕೆಲವು ಹವ್ಯಾಸಗಳನ್ನು ಅಳವಡಿಸಿಕೊಳ್ಳಲು ಅಲ್ಲದೇ ಪುಸ್ತಕಗಳನ್ನು ಓದಲು ಪ್ರೋತ್ಸಾಹ ನೀಡಿ – ನಾವು ನಮ್ಮ ವಿದ್ಯಾರ್ಥಿನಿಯರಲ್ಲಿ ಓದುವ ಹವ್ಯಾಸಗಳನ್ನು ರೂಢಿಸಲು ಪ್ರಯತ್ನಿಸಿದ್ದೇವೆ. ನಮ್ಮ ವಿದ್ಯಾರ್ಥಿನಿಯರಲ್ಲಿ ಸಾಕಷ್ಟು ವಿದ್ಯಾರ್ಥಿನಿಯರು ಉತ್ತಮವಾಗಿ ನೃತ್ಯ ಮಾಡುತ್ತಾರೆ ; ಅವಳಿಗೆ ಹೊಸ ವಿಧಗಳನ್ನು ಕಲಿಯಲು ಮತ್ತು ಈಗಾಗಲೇ ತಿಳಿದಿರುವ ನೃತ್ಯಗಳನ್ನು ಮತ್ತಷ್ಟು ಉತ್ತಮಗೊಳಿಸಲು ಈ ಸಮಯವನ್ನು ವಿನಿಯೋಗಿಸುವಂತೆ ಹುರಿದುಂಬಿಸಿ. ದೈಹಿಕ ಸದೃಢತೆಯು ಅತೀ ಅವಶ್ಯವಾದದ್ದು; ಅವಳಿಗೆ ಸ್ವಲ್ಪ ಸಮಯವನ್ನು ದೈಹಿಕ ವ್ಯಾಯಾಮಗಳನ್ನು ಮಾಡುವುದರಲ್ಲಿ ಕಳೆದು ದೈಹಿಕವಾಗಿ ಸದೃಢವಾಗಿರಲು ಹೇಳಿ. ನಾವು ಅವಳಿಗೆ ಯೋಗವನ್ನು ಕಲಿಸಿದ್ದೇವೆ; ಕೆಲವು ಆಸನಗಳನ್ನು ಅಭ್ಯಾಸ ಮಾಡಲು ಹೇಳಿ. ತಮ್ಮ ಮಗಳಿಗೆ ಅವಳು ಬಲಿಷ್ಟವಾಗಿದ್ದಾಳೆ ಮತ್ತು ಈ ಸಮಸ್ಯೆಗಳನ್ನು ಸರಾಗವಾಗಿ ದಾಟಲು ಶಕ್ತಳಾಗಿದ್ದಾಳೆ ಎಂದು ಹೇಳಿ – ಕಠಿಣ ಸಮಯಗಳು ಬಹಳ ಕಾಲ ಉಳಿಯುವದಿಲ್ಲ , ಅದರಂತೆಯೇ ಕಠಿಣ ಜನರೂ ಕೂಡ.

ಆನ್‌ಲೈನ್ ಮೂಲಕ ಶುಲ್ಕವನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ – ವಿವರಗಳನ್ನು ಶಾಲಾ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ತಮ್ಮಲ್ಲಿ ಕೆಲವರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ತಾವು ಶುಲ್ಕವನ್ನು ಎರಡು ಕಂತುಗಳಲ್ಲಿ ಭರಿಸಬಹುದಾಗಿದೆ. ಶೀಘ್ರವಾದ ಕ್ರಮ ಕೈಗೊಳ್ಳಲು ವಿನಂತಿಸಲಾಗಿದೆ.

ಕೊನೆಯದಾಗಿ ಹೇಳುವುದೇನೆಂದರೆ ; ನಾವು ಮೆಸೆಜ್‌ಗಳನ್ನು ಕಳುಹಿಸುವ ಮೂಲಕ, ಪೋನ್ ಕರೆಗಳ ಮುಖಾಂತರ ತಮ್ಮ ಸಂಪರ್ಕದಲ್ಲಿರಲು ಪ್ರಯತ್ನಿಸುತ್ತೇವೆ, ಆದಾಗ್ಯೂ ಮುಂಬರುವ ಮಾಹಿತಿಗಳಿಗಾಗಿ ಶಾಲಾ ವೆಬ್‌ಸೈಟ್‌ಗೆ ಭೇಟಿ ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ತಾವು ಮತ್ತು ತಮ್ಮ ಕುಟುಂಬದವರು ಸೌಖ್ಯವಾಗಿ ಮತ್ತು ಸಂತೋಷವಾಗಿರಲೆಂದು ಹಾರೈಸುತ್ತೇನೆ.

ವಂದನೆಗಳೊಂದಿಗೆ

ಪ್ರಾಚಾರ್ಯರು
**08 ಜೂನ್ 20**